ಆಗಿರುತ್ತದೆ. ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 331 ಪಿಓಪಿ 2009, ದಿನಾಂಕ: 11/02/2010ರಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿ ಪೊಲೀಸ್ ಉಪವಿಭಾಗವನ್ನು ಸಹ ತೆರೆಯಲಾಗಿದೆ. ಇದಕ್ಕಾಗಿ ತಗಲುವ ಆವರ್ತಕ ವೆಚ್ಚವು ರೂ. 13,03,956/- ಆಗಿರುತ್ತದೆ. ಈ ಪೊಲೀಸ್ ಠಾಣೆಗಳನ್ನು 2010-11ನೇ ಸಾಲಿನಿಂದ ಕಾರ್ಯಗತಗೊಳಿಸಲು ಮಂಜೂರಾತಿ ನೀಡಿದ್ದು, 25 ಪೊಲೀಸ್ ಠಾಣೆಗಳ ಮತ್ತು ಉಪವಿಭಾಗದ ಒಟ್ಟು ಆವರ್ತಕ ವೆಚ್ಚವು ರೂ. 16,62,53,084/-ಗಳಾಗುತ್ತವೆ. 2010-2011ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "2055-00-800-0-01 ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವುದು" ಇದರಡಿಯಲ್ಲಿ ರೂ. 406.69 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದೆ. 2010-11ನೇ ಸಾಲಿನಲ್ಲಿ ಮಂಜೂರಾತಿ ನೀಡಿದ ಪೊಲೀಸ್ ಠಾಣೆಗಳ ಆವರ್ತಕ ವೆಚ್ಚವನ್ನು ಭರಿಸಲು ಸದರಿ ಸಾಲಿನಲ್ಲಿ ಕಲ್ಪಿಸಿರುವ ಅನುದಾನವು ಕಡಿಮೆ ಆಗಿರುತ್ತದೆ.

2. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಮಂಜೂರಾತಿ ನೀಡಿದ 25 ಪೊಲೀಸ್ ಠಾಣೆಗಳು ಮತ್ತು ಒಂದು ಉಪ ವಿಭಾಗವು ಪೂರ್ಣವಾಗಿ ಕಾರ್ಯಾರಂಭಗೊಳ್ಳಲು ಕೊರತೆ ಬೀಳುವ ಅನುದಾನವನ್ನು ಸರಿದೂಗಿಸಿ ಅವುಗಳು ಕಾರ್ಯಾರಂಭ ಮಾಡಿದ ನಂತರ ಸಿಂಧನೂರು ನಗರಕ್ಕೆ ಹೊಸ ಪೊಲೀಸ್ ಠಾಣೆಯನ್ನು ಸೃಜಿಸುವ ಬಗ್ಗೆ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಇ) ಬಂದಿದೆ.

ಈ) ಮತ್ತು ಉ) ಮೇಲಿನ "ಆ" ಪ್ರಶ್ನೆಗೆ ಕ್ರಮ ಸಂಖ್ಯೆ: (2)ರಲ್ಲಿ ನೀಡಿದ ಉತ್ತರ ಈ ಪ್ರಶ್ನೆಗಳಿಗೂ ಅನ್ವಯಿಸುತ್ತದೆ.

ಕೊಳ್ಳೇಗಾಲದಲ್ಲಿರುವ ಬಂದೀಖಾನೆ ಸ್ಥಳಾಂತರಿಸುವುದು

203 (556) ಶ್ರೀ ನರೇಂದ್ರ ಆರ್. (ಹನೂರು) ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದಲ್ಲಿರುವ ಬಂದೀಖಾನೆಯ ಸ್ಥಳವು ಅತೀ ಚಿಕ್ಕದಾಗಿದ್ದು, ಅಲ್ಲಿ ಮೂಲಭೂತ ಸೌಲಭ್ಯಗಳೂ ಸಹ ಇಲ್ಲದಿರುವುದರಿಂದ ಅದನ್ನು ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):

ಅ) ಕೊಳ್ಳೇಗಾಲ ಸಬ್–ಜೈಲ್ ಕಟ್ಟಡವನ್ನು ಪಟ್ಟಣದ ಹೊರವಲಯಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ.

ಆ) ನೂತನ ತಾಲ್ಲೂಕು ಉಪ ಕಾರಾಗೃಹ ನಿರ್ಮಾಣಕ್ಕಾಗಿ ಕೊಳ್ಳೇಗಾಲ ರೇಷ್ಮೆ ಕಸಿ ಕ್ಷೇತ್ರದ 6.21 ಎಕರೆ ಜಮೀನು ಗುರುತಿಸಲಾಗಿದೆ. ಸದರಿ ಜಮೀನು ಕಾರಾಗೃಹ ಇಲಾಖೆಗೆ ಮಂಜೂರಾಗಬೇಕಾಗಿದ್ದು, ಮಂಜೂರಾಗಿ ಇಲಾಖಾ ಸ್ವಾಧೀನಕ್ಕೆ ಪಡೆದ ನಂತರ ನೂತನ ಕಟ್ಟಡ ನಿರ್ಮಿಸಿ ಅಲ್ಲಿಗೆ ಸ್ಥಳಾಂತರಿಸಲಾಗುವುದು.

ಮಹಾಲಕ್ಷ್ಮಿ ಲೇಔಟ್ ವಿಧಾನ ಸಭಾ ಕ್ಷೇತ್ರದಲ್ಲಿ ವಾಹನ ದಟ್ಟಣೆ ಇರುವ ಜಾಗದಲ್ಲಿ ಟ್ರಾಫಿಕ್ ಅಧಿಕಾರಿ ಸಿಬ್ಬಂದಿಯನ್ನು ನಿಯೋಜಿಸುವುದು

204 (608) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾಲಕ್ಷ್ಮಿ ಲೇಔಟ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಹನ ದಟ್ಟಣೆ ಹೆಚ್ಚಾಗುತ್ತಿದ್ದು, ಬಡಾವಣೆಗಳಲ್ಲಿ ಇಲಾಖೆಯು ಟ್ರಾಫಿಕ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲು ಇಲಾಖೆಗೆ ಇರುವ ಸಮಸ್ಯೆಗಳೇನು ಹಾಗೂ ನಿಯೋಜಿಸದೇ ಇರುವುದಕ್ಕೆ ಕಾರಣಗಳೇನು;

ಆ) ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಮೆಟ್ರೊ ಕಾಮಗಾರಿಯಿಂದಾಗಿ ವಾಹನ ದಟ್ಟಣೆ ಹೆಚ್ಚಾಗಿದ್ದು, ಆಗಾಗ ಅಪಘಾತಗಳು ಆಗುತ್ತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಟ್ರಾಫಿಕ್ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸುವುದೇ;

ಈ) ಈ ಕ್ಷೇತ್ರದಲ್ಲಿ ಖಾಲಿಯಿರುವ ಪೊಲೀಸ್ ಅಧಿಕಾರಿ / ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; (ಟ್ರಾಫಿಕ್ ಮತ್ತು ಕಾನೂನು ಮತ್ತು ಸುವ್ಯವಸ್ಥೆ ವಿವರ ನೀಡುವುದು)?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಮಹಾಲಕ್ಷ್ಮಿ ಲೇಔಟ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚಿನ ಸಿಬ್ಬಂದಿ ಗೃಹರಕ್ಷಕ ದಳದ ಸಿಬ್ಬಂದಿಯನ್ನು ಸೂಕ್ತ ಸ್ಥಳಗಳಲ್ಲಿ ದ್ವಿ–ಪಾಳಿಯಲ್ಲಿ